

# ಆನೆ ಎಲ್ಲಿ ನಿನ್ನ ಮನೆ?

**ಆನೆ ದಾಳಿ ಪ್ರಕರಣಗಳು ಆಗಾಗ್ಗೆ ಸುದ್ದಿಯಲ್ಲಿರುತ್ತವೆ. ಈ ದಾಳಿಗಳ ಹಿಂದಿನ ಕಾರಣಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವ ಸಮಯ ಇದಾಗಿದೆ. ಆನೆಗಳ ಜೀವನ ರೀತಿಯ ಮೇಲೆ ಬೆಳಕು ಚೆಲ್ಲುವ ಈ ಲೇಖನ, ಮನುಷ್ಯನ ಆಲೋಚನಾಕ್ರಮ ಬದಲಾಗಬೇಕಿರುವ ಅನಿವಾರ್ಯವನ್ನು ಒತ್ತಿ ಹೇಳುತ್ತಿದೆ.**

**■ ಗೋಣಿಕೊಪ್ಪಲು ಡಿ. ಕೃಷ್ಣ ಚೈತನ್ಯ**

ಮೈಸೂರಿನ ದಸರಾ ಮೆರವಣಿಗೆಯ ಜಂಬೂ ಸವಾರಿ ನೋಡದವರುಂಟೆ? ಲಕ್ಷಾಂತರ ಪ್ರವಾಸಿಗರ ಕೇಂದ್ರಬಿಂದುವಾಗಿ ಗಮನ ಸೆಳೆಯುವ, ದೇಹಗಾತ್ರ, ಗಾಂಭೀರ್ಯದ ನಡಿಗೆ, ಗತ್ತು ಮತ್ತು ಸೌಂದರ್ಯದಿಂದ ಮನಸೂರೆಗೊಳ್ಳುವ ಅಂಬಾರಿ ಹೊತ್ತು ಸಾಗುವ ಆನೆಯನ್ನು ಕಣ್ತುಂಬಿಕೊಳ್ಳುವುದೇ ಒಂದು ಸುಂದರ ಅನುಭವ.

ಮೆರವಣಿಗೆಯಲ್ಲಿ ತೆರಳುವ ಆನೆ ನೋಡುವಾಗ ಸಿಗುವ ಆನಂದ, ಕಾಡೊಳಗಿನ ಆನೆ ನೋಡಿದರೆ ಆಗದು. ಮನಸ್ಸಿನಲ್ಲಿ ಭಯ, ಆತಂಕ.

'ಗಜರಾಜ' ಎಂದು ಕರೆಯುವ ಈ ಜೀವಿ ಸುಮಾರು 23 ತಿಂಗಳು ತನ್ನ ತಾಯಿಯ ಗರ್ಭದಲ್ಲಿದ್ದು, ಜನಿಸಿದಾಗ ಪುಟ್ಟ ಮರಿಯಾಗಿರುತ್ತದೆ. ತನ್ನ ತುಂಟಾಟದಿಂದ ಮನಸೆಳೆಯುತ್ತದೆ. ತನ್ನ ತಾಯಿಯಿಂದ ಜೀವನದ ಪಾಠಗಳನ್ನು ನಿಧಾನವಾಗಿ ಕಲಿಯಲು ಆರಂಭಿಸುತ್ತದೆ.

ಒಮ್ಮೆ ರಸ್ತೆಯಲ್ಲಿ ಹುಣಸೂರಿನಿಂದ ಗೋಣಿಕೊಪ್ಪಕ್ಕೆ ಸಂಚರಿಸುವಾಗ ಕೌತುಕವೊಂದು ಎದುರಾಯಿತು. ತಾಯಿ ಆನೆ ಮತ್ತು ಅದರ ಮರಿ ನೀರಿಗೆ ಇಳಿದು ಜಲಕ್ರೀಡೆ ಮುಗಿಸಿ ಹೊರಡುವುದರಲ್ಲಿ ಇದ್ದವು. ವಾಹನವನ್ನು ರಸ್ತೆ ಬದಿಯಲ್ಲಿ ಸ್ವಲ್ಪ ಹೊತ್ತು ನಿಲ್ಲಿಸಿ, ಅವುಗಳನ್ನು ತದೇಕಚಿತ್ತದಿಂದ ಗಮನಿಸತೊಡಗಿದೆ. ಮರಿಗೆ ತಾಯಿ ಆನೆ ಚೇಣಿಕಡ್ಡಿಯ ಹುಲ್ಲನ್ನು ಸೊಂಡಿಲಿನಿಂದ ಸುತ್ತಿಕೊಂಡು ರಪ್ ರಪ್ ಎಂದು ಏಟು ಕೊಡುತ್ತಿತ್ತು. ನನಗೆ ಆಶ್ಚರ್ಯ! ಇದೇಕೆ ಎಂದು ಸ್ವಲ್ಪ ಹೊತ್ತು ನೋಡಿದಾಗ ತಿಳಿದದ್ದು, ಮರಿಯನ್ನು ನೀರಿನಿಂದ ಹೊರಗೆ ಕರೆತರಲು ತಾಯಿ ಪ್ರಯತ್ನಿಸುತ್ತಿದೆ ಎನ್ನುವುದು. ಮರಿಗೆ ನೀರಿನಿಂದ ಹೊರಗೆ ಹೋಗಲು ಮನಸ್ಸಿಲ್ಲದಿರುವುದು, ಮಕ್ಕಳನ್ನು ನದಿಯ ನೀರಿನಲ್ಲಿ ಆಟವಾಡಿಸುವಾಗ ಹೇಗೆ 'ಸಪ್ಪ ಸಪ್ಪ' ಎಂದು ತೊದಲು ನುಡಿಯಿಂದ ನಮ್ಮನ್ನು ಮರುಳು ಮಾಡುವಂತೆಯೇ ಇತ್ತು. ಕೆಲವೊಮ್ಮೆ ಮಕ್ಕಳು ಚಂಡಿ ಹಿಡಿದು ಹಟ ಮಾಡುವಾಗ ತಾಯಿಯೋ ತಂದೆಯೋ ಕೋಲು ತೋರಿಸಿ ಮಕ್ಕಳ ಬಾಯಿ ಮುಚ್ಚಿಸುವಂತೆ ಇತ್ತು ಆ ಪ್ರಸಂಗ.

ಸಾಮಾನ್ಯವಾಗಿ ಮರಿಗಳಿಗೆ ಜೀವನದ ಪಾಠಗಳನ್ನು ಹಿಂಡಿನಲ್ಲಿರುವ ಎಲ್ಲಾ ಆನೆಗಳು